



ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರನ್ನೂ ತಲುಪುತ್ತಿರುವ ಕ್ಷಯ ರೋಗ ನಿರ್ಮೂಲನಾ ಆಂದೋಲನ

ಅರಿವು ಮತ್ತು ಜಾಗೃತಿಯನ್ನು ಮೂಡಿಸಲು ಈ ಆಂದೋಲನದಲ್ಲಿ ಕಲಾ ಪ್ರಕಾರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜಾಥಾಗಳು, ಜನಪದ ಕಲಾಪ್ರದರ್ಶನಗಳು ಹಾಗೂ ಬೀದಿ ನಾಟಕಗಳ ಮೂಲಕ ಜನರಲ್ಲಿ ಕ್ಷಯರೋಗ ಮತ್ತು ಅದಕ್ಕೆ ಪಡೆಯಬೇಕಾದ ಚಿಕಿತ್ಸೆಗಳ ಕುರಿತು ತಿಳಿವಳಿಕೆ ಮೂಡಿಸಲು ಪ್ರಯತ್ನಿಸಲಾಗುತ್ತಿದೆ.

ರಾಜ್ಯದ ಎಲ್ಲ ಸಮುದಾಯಗಳನ್ನು ತಲುಪುವಂತಹ ಬೃಹತ್ ಸಾರ್ವಜನಿಕ ಆರೋಗ್ಯ ಆಂದೋಲನ ನಡೆಸಲು ಬೇಕಾದ ಮಾನವ ಸಂಪನ್ಮೂಲವೂ ದೊಡ್ಡದೇ. ಆಂದೋಲನವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ದೊಡ್ಡದೊಂದು ಬಳಗವೇ ಸಜ್ಜಾಗಿದೆ. ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಕಾರ್ಯಕರ್ತರುಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಸಹಾಯಕಿಯರು, ರಾಷ್ಟ್ರೀಯ ಆರೋಗ್ಯ ಅಭಿಯಾನದ ಆಶಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು, ಕ್ಷಯ ನಿರ್ಮೂಲನಾ ಯೋಜನೆಗಳನ್ನು ಜಾರಿಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಾಗದ ಕೆಎಚ್‌ಪಿಟಿ (ಥಾಲಿ) ಹಾಗು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನ ಕಾರ್ಯಕ್ರಮ, ಸ್ವಯಂಸೇವಾ ಸಂಸ್ಥೆಗಳು ಹಾಗೂ ಸಮುದಾಯ ಆರೋಗ್ಯ ಸಂಸ್ಥೆಗಳ ಸದಸ್ಯರು ಆಂದೋಲನದಲ್ಲಿ ಭಾಗವಹಿಸುತ್ತಿದ್ದಾರೆ. ಒಟ್ಟಿನಲ್ಲಿ, ಸಾಮೂಹಿಕ ಜಾಡ್ಯವೊಂದನ್ನು ನಿರ್ಮೂಲನೆಗೊಳಿಸಲು ಸಮೂಹವನ್ನೇ ಭಾಗಿಯಾಗಿಸುತ್ತಿರುವುದು ಈ ವಿಶಿಷ್ಟ ಆಂದೋಲನದ ವಿಶೇಷಗಳಲ್ಲೊಂದು.




ಕ್ಷಯ ರೋಗ ತಪಾಸಣೆಯಲ್ಲಿ ಬಳಸುವ **CBNAAT** ಯಂತ್ರ

## ಕ್ಷಯರೋಗಕ್ಕೆ ಚಿಕಿತ್ಸೆ

ರೋಗಲಕ್ಷಣಗಳು ಹಾಗೂ ತೀವ್ರತೆಗೆ ಸಂಬಂಧಿಸಿದಂತೆ ಚಿಕಿತ್ಸೆಯ ಕಾಲಾವಧಿಯೂ ಬದಲಾಗುವುದು. ರೋಗಿಯ ತೂಕಕ್ಕೆ ಅನುಗುಣವಾಗಿ ಮಾತ್ರೆಗಳನ್ನು ನೀಡಲಾಗುತ್ತದೆ. ಹೊಸ ಕ್ಷಯ ರೋಗಿಗಳಿಗೆ (ಶ್ವಾಸಕೋಶದ ಕ್ಷಯ ಹಾಗೂ ಶ್ವಾಸಕೋಶೇತರ ಕ್ಷಯ ಪ್ರಥಮ ಬಾರಿಗೆ ಕ್ಷಯರೋಗ ಧೃಡಪಟ್ಟವರಿಗೆ) ಚಿಕಿತ್ಸಾ ಅವಧಿ 6 ತಿಂಗಳು. ಈ ಹಿಂದೆ ಕ್ಷಯ ರೋಗ ಚಿಕಿತ್ಸೆ ಪಡೆದವರು (ಶ್ವಾಸಕೋಶದ ಕ್ಷಯ ಚಿಕಿತ್ಸೆ ಅಪೂರ್ಣಗೊಂಡವರು, ಕ್ಷಯರೋಗದ ಚಿಕಿತ್ಸೆಯನ್ನು ಅರ್ಧಕ್ಕೆ ಮೊಟಕುಗೊಳಿಸಿದವರು, ಹಾಗೂ ಚಿಕಿತ್ಸೆ ಫಲಕಾರಿಯಾಗದೆ **Positive** ಬಂದವರು) ಇಂತವರು ಸಹ ಹೊಸದಾಗಿ ಮತ್ತೆ ಚಿಕಿತ್ಸೆ ಪ್ರಾರಂಭಿಸಿ 6 ತಿಂಗಳು ಚಿಕಿತ್ಸೆ ಪಡೆಯಬೇಕಾಗುವುದು.

ಔಷಧ ಪ್ರತಿರೋಧಕ ಒಡ್ಡುವ ರೋಗಿಗಳಿಗೆ **(Drug Resistant TB)** ಚಿಕಿತ್ಸಾ ಅವಧಿ 9ರಿಂದ 11 ತಿಂಗಳು. ಕ್ಷಯರೋಗ ಉಲ್ಬಣಾವಸ್ಥೆಗೆ ತಲುಪಿದವರಿಗೆ **(XDR)** ಚಿಕಿತ್ಸಾ ಅವಧಿ 27ರಿಂದ 30 ತಿಂಗಳು.

ಕ್ಷಯರೋಗ ನಿರ್ಮೂಲನೆಗೆ ಹೊಸದಾಗಿ ಬೆಡಾಕ್ಯೂಲಿನ್ ಮತ್ತು ಬೆಲಾಮಿನೈಡ್ ಎನ್ನುವ ಎರಡು ಮಾತ್ರೆಗಳನ್ನು ಪರಿಚಯಿಸಿದ್ದು, ಈ ಔಷಧಿಗಳು ಸರ್ಕಾರಿ ಔಷಧಾಲಯಗಳಲ್ಲಿ ಮಾತ್ರ ಲಭ್ಯವಿದೆ.

ಕ್ಷಯರೋಗಕ್ಕೆ ಚಿಕಿತ್ಸೆ ಪ್ರಾರಂಭವಾಗುತ್ತಲೇ ಕ್ಷಯರೋಗ ಹರಡುವ ಸಂಭವ ಕಡಿಮೆಯಾಗುತ್ತದೆ. ಆದರೆ, ಯಾವುದೇ ಸ್ಥಿತಿಯಲ್ಲೂ ಚಿಕಿತ್ಸೆಯನ್ನು ಅರ್ಧದಲ್ಲಿ ನಿಲ್ಲಿಸಬಾರದು. ಹಾಗೆ ಮಾಡಿದಲ್ಲಿ ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯುವುದು ಕಷ್ಟವಾಗುತ್ತದೆ.

ಕ್ಷಯ ರೋಗದ ವಿರುದ್ಧದ ಹೋರಾಟ ಸಾಮೂಹಿಕ ಜವಾಬ್ದಾರಿಯಿಂದ ಯಶಸ್ವಿಯಾಗುವಂತಹದ್ದು. ಆ ಕಾರಣದಿಂದಲೇ ಎಲ್ಲರೂ ಒಗ್ಗೂಡಿ ಕ್ಷಯರೋಗದ ವಿರುದ್ಧ